# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2484** |
| ಉತ್ತರಿಸಬೇಕಾದ ದಿನಾಂಕ | : | 23.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ). | ವಸತಿ ಇಲಾಖೆಯ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಲೆಮಾರಿ/ಅರೆ ಅಲೆಮಾರಿ/ ಕಾಡುಗೊಲ್ಲ ಸಮುದಾದವರಿಗೆ ದೇವರಾಜ್ ಅರಸು ವಸತಿ ಯೋಜನೆಯ ಅಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಪ್ರತ್ಯೇಕವಾಗಿ ಗುರಿ ನಿಗದಿಪಡಿಸಲಾಗುತ್ತಿದೆಯೇ ; | ದೇವರಾಜ ಅರಸು ವಸತಿ ಯೋಜನೆಯು 14 ವಿಶೇಷ ವರ್ಗದ ವಸತಿ ರಹಿತರಿಗೆ ವಸತಿ ಸೌಕರ್ಯ ಕಲ್ಪಿಸುವ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಅಲೆಮಾರಿ/ಅರೆ ಅಲೆಮಾರಿ ವರ್ಗವು ಒಂದು ವಿಶೇಷ ವರ್ಗವೆಂದು ಪರಿಗಣಿಸಿ ಪ್ರತಿ ವರ್ಷ ಸರ್ಕಾರವು ವಿಶೇಷ ವರ್ಗದಡಿ ನೀಡಲಾಗುವ ಮನೆಗಳ ಗುರಿಯಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಜಿಲ್ಲಾ ಸಮಿತಿಯಲ್ಲಿ ಆಯ್ಕೆ ಮಾಡಿ ಸಲ್ಲಿಸಲಾಗುವ ಪಟ್ಟಿಗೆ ಅನುಗುಣವಾಗಿ ರಾಜೀವ್ ಗಾಂಧಿ ವಸತಿ ನಿಗಮವು ನಿಯಮಾನುಸಾರ ಅನ್ ಲೈನ್‌ನಲ್ಲಿ ಗುರಿ ನಿಗಧಿಪಡಿಸಿ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. |
| ಆ) | ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ 2019-20, 2020-21 ಮತ್ತು 2021-22 ರ ಅವಧಿಯಲ್ಲಿ ದೇವರಾಜ ಅರಸು ವಸತಿ ಯೋಜನೆಯಡಿಯಲ್ಲಿ ಅಲೆಮಾರಿ/ಅರೆ ಅಲೆಮಾರಿ/ ಕಾಡುಗೊಲ್ಲ ಸಮುದಾದವರಿಗೆ ನಿಗಧಿಪಡಿಸಲಾಗಿದ್ದ ಮನೆಗಳ ಸಂಖ್ಯೆಯ ಗುರಿ ಎಷ್ಟು ; ಸಾಧಿಸಲಾಗದ ಪ್ರಗತಿ ಎಷ್ಟು ; (ವರ್ಷವಾರು ಪ್ರತ್ಯೇಕ ವಿವರ ನೀಡುವುದು) | 2019-20 ಮತ್ತು 2020-21 ನೇ ಸಾಲಿಗೆ ದೇವರಾಜ ಅರಸು ವಸತಿ ಯೋಜನೆಯಡಿ ಅಲೆಮಾರಿ/ಅರೆ ಅಲೆ ಮಾರಿ ವರ್ಗದ ವಸತಿ ರಹಿತರಿಗೆ 40301 ಮನೆಗಳ ಗುರಿಯನ್ನು ನಿಗಧಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಪೈಕಿ 20721 ಮನೆಗಳನ್ನು ಆಯ್ಕೆ ಮಾಡಲಾಗಿದೆ. 19580 ಮನೆಗಳು ಆಯ್ಕೆಗೆ ಬಾಕಿ ಇರುತ್ತವೆ. ಶ್ರೇಣಿವಾರು ವಿವರ ಮತ್ತು ವರ್ಷವಾರು ವಿವರ ಕೆಳಕಂಡಂತಿದೆ. |

| **ಶ್ರೇಣಿ** | **ಗುರಿ** | **ಆಯ್ಕೆ** | **ಪೂರ್ಣ** | **ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವ ಮನೆಗಳು** | **ಇನ್ನೂ ಪ್ರಾರಂಭವಾಗಬೇಕಿರುವ ಮನೆಗಳು** | **ವಿವಿಧ ಕಾರಣಗಳಿಂದ ಬ್ಲಾಕ್ ಮಾಡಲಾದ ಮನೆಗಳು** |
|---|---|---|---|---|---|---|
| 2019-2020 | 88 | 88 | 9 | 60 | 18 | 1 |
| 2020-2021 | 40213 | 20633 | 528 | 3534 | 16104 | 467 |
| **ಒಟ್ಟು** | **40301** | **20721** | **537** | **3594** | **16122** | **468** |

* 2021-2022ನೇ ಸಾಲಿನಲ್ಲಿ ಸರ್ಕಾರವು 25000 ಮನೆಗಳ ಗುರಿಯನ್ನು ನಗರ ಪ್ರದೇಶಕ್ಕೆ ಸೀಮಿತಗೊಳಿಸಿ ಗುರಿ ಹಂಚಿಕೆ ಮಾಡಿದ್ದು, ಸದರಿ ಗುರಿಯನ್ನು ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಿ ಹಂಚಿಕೆ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ನಿಗಧಿಪಡಿಸಲಾದ ವಾರ್ಷಿಕ ಗುರಿ ಸಾಧನೆಗೆ ಅಗತ್ಯ ಪ್ರಮಾಣದಲ್ಲಿ ಅರ್ಹ ಫಲಾನುಭವಿಗಳನ್ನು ಈಗಾಗಲೇ ಆಯ್ಕೆ ಮಾಡಲಾಗಿದೆಯೇ ; (ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆಯ ವಿವರ ನೀಡುವುದು) | ಸರ್ಕಾರದ ಆದೇಶದಂತೆ, ನಿಗಮದಿಂದ ಜಿಲ್ಲೆಗಳಿಗೆ ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗುತ್ತಿದ್ದು, ಜಿಲ್ಲಾಧಿಕಾರಿಗಳಿಂದ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಸಭಾ ನಡವಳಿಯೊಂದಿಗೆ ಪಟ್ಟಿಯನ್ನು ನಿಗಮಕ್ಕೆ ಸಲ್ಲಿಸಿದ್ದಲ್ಲಿ ಫಲಾನುಭವಿಗಳ ವರ್ಗಾವಾರು ಪಟ್ಟಿಗೆ ಅನುಗುಣವಾಗಿ ಅನ್-ಲೈನ್ ನಲ್ಲಿ ಗುರಿ ನಿಗಧಿಪಡಿಸಿ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆಯ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಈ) | ನಿಗಧಿಪಡಿಸಲಾದ ಗುರಿ ಸಾಧನೆಯಾಗದೆ ಇರಲು ಫಲಾನುಭವಿಗಳ ಆಯ್ಕೆಯಲ್ಲಿ ಆಗುತ್ತಿರುವ ವಿಳಂಬವೇ ಮುಖ್ಯ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಸರ್ಕಾರದ ಮನೆ ಮಂಜೂರಾತಿ ಆದೇಶವನ್ನು ಜಿಲ್ಲೆಗಳಿಗೆ ಕಳುಹಿಸಿ ಜಿಲ್ಲಾಧಿಕಾರಿಗಳ ಜಿಲ್ಲಾ ಸಮಿತಿಯಲ್ಲಿ ಅನುಮೋದಿಸಲ್ಪಟ್ಟ ಎಲ್ಲಾ ಫಲಾನುಭವಿಗಳಿಗೆ ಆನ್‌ಲೈನ್ ನಲ್ಲಿ ಗುರಿ ನಿಗಧಿಪಡಿಸಿ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಗುರಿಗೆ ಅನುಗುಣವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಫಲಾನುಭವಿಗಳ ನಿವೇಶನ ಮತ್ತು ಅಗತ್ಯ ದಾಖಲಾತಿಗಳು ಇಲ್ಲವಾದ್ದರಿಂದ ಸ್ವಲ್ಪ ಮಟ್ಟಿಗೆ ಅಯ್ಕೆಯಲ್ಲಿ ವಿಳಂಭವಾಗುತ್ತಿದ್ದು, ಈ ನಿಟ್ಟಿನಲ್ಲಿ ಪ್ರತಿ 15 ದಿನಗಳಿಗೊಮ್ಮೆ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಯೋಜನೆಯ ಅನುಷ್ಠಾನಾಧಿಕಾಗಳನ್ನು ಸಂಪರ್ಕಿಸಿ ಲೋಪ ದೋಷಗಳನ್ನು ಸರಿಪಡಿಸಿ ಯೋಜನೆಯನ್ನು ಸಮರ್ಪವಾಗಿ ಅನುಷ್ಠಾನಗೊಳಿಸಿಲು ಕ್ರಮ ವಹಿಸಲಾಗುತ್ತಿದೆ. |
| ಉ) | ಬಂದಿದ್ದಲ್ಲಿ, ಈ ಸಮಸ್ಯೆಯನ್ನು ನಿವಾರಿಸುವ ನಿಟ್ಟಿಯ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ? | |

ಸಂಖ್ಯೆ :ವಇ 199 ಹೆಚ್‌ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

LCQ-2484

ಅನುಬಂಧ 3

2019-2020 ಮತ್ತು 2020-2021ನೇ ಸಾಲಿನವರೆಗೆ ಅಲೆಮಾರಿ/ಅರೆ ಅಲೆಮಾರಿ ವರ್ಗಕ್ಕೆ ನೀಡಲಾದ ಮನೆಗಳ ಜಿಲ್ಲಾವಾರು ಪ್ರಗತಿ ವಿವರ.

| District | Selection | Completed | Physical Progress | | | | Unstarted | Blocked |
|---|---|---|---|---|---|---|---|---|
| | | | Found | Lintel | Roof | Total | | |
| 1 | 2 | 3 | 4 | 5 | 6 | 7 | 8 | 9 |
| Bagalkot | 22 | 0 | 0 | 0 | 0 | 0 | 22 | 0 |
| Belagavi | 36 | 2 | 2 | 6 | 1 | 9 | 25 | 0 |
| Bengaluru Rural | 5 | 0 | 1 | 1 | 0 | 2 | 3 | 0 |
| Bidar | 176 | 0 | 10 | 5 | 1 | 16 | 160 | 0 |
| Chamarajanagar | 18 | 0 | 0 | 0 | 0 | 0 | 18 | 0 |
| Chikkaballapur | 15 | 0 | 2 | 0 | 0 | 2 | 13 | 0 |
| Chikkamagaluru | 48 | 1 | 6 | 0 | 0 | 6 | 41 | 0 |
| Chitradurga | 8894 | 55 | 685 | 173 | 159 | 1017 | 7548 | 274 |
| Davanagere | 101 | 0 | 3 | 1 | 0 | 4 | 97 | 0 |
| Dharwad | 10 | 0 | 0 | 3 | 0 | 3 | 7 | 0 |
| Hassan | 664 | 1 | 64 | 6 | 3 | 73 | 588 | 2 |
| Haveri | 87 | 5 | 3 | 9 | 1 | 13 | 68 | 1 |
| Kalaburagi | 78 | 0 | 11 | 0 | 0 | 11 | 67 | 0 |
| Kodagu | 3 | 0 | 0 | 0 | 0 | 0 | 3 | 0 |
| Kolar | 21 | 1 | 0 | 0 | 2 | 2 | 18 | 0 |
| Koppal | 108 | 5 | 32 | 20 | 7 | 59 | 43 | 1 |
| Mandya | 1 | 0 | 0 | 0 | 0 | 0 | 1 | 0 |
| Mysuru | 42 | 0 | 0 | 0 | 1 | 1 | 41 | 0 |
| Shivamogga | 233 | 0 | 10 | 2 | 2 | 14 | 219 | 0 |
| Tumakuru | 10059 | 466 | 1560 | 404 | 374 | 2338 | 7065 | 190 |
| Vijayapura | 8 | 0 | 5 | 0 | 0 | 5 | 3 | 0 |
| Yadgiri | 92 | 1 | 16 | 2 | 1 | 19 | 72 | 0 |
| **Grand Total** | **20721** | **537** | **2410** | **632** | **552** | **3594** | **16122** | **468** |